ನೋಂದಾಯಿತ ಸಂ.ಡಿಎಲ್-(ಎನ್) 007/2003-20

# ಭಾರತದ ರಾಜ್ಯಪತ್ರ

**ಸಿಜಿ-ಡಿಎಲ್-ಇ-27092020-222039**

**ಅಸಾಧಾರಣ**

**ಭಾಗ 2 – ಉಪವಿಭಾಗ 1**

**ಪ್ರಾಧಿಕೃತರಿಂದ ಪ್ರಕಟಿಸಲಾಗಿದೆ**

ಸಂ. 46 ನವದೆಹಲಿ, ಭಾನುವಾರ, ಸೆಪ್ಟೆಂಬರ್ 27, 2020/ ಆಶ್ವಯುಜ 5, 1942 (ಶಕ)

ಪ್ರತ್ಯೇಕವಾಗಿ ಸಂಕಲಿಸಿ ಕಡತಕ್ಕೆ ಹಾಕಲು ಈ ಭಾಗಕ್ಕೆ ಪ್ರತ್ಯೇಕವಾದ ಪುಟಸಂಖ್ಯೆ ನೀಡಲಾಗಿದೆ

**ಕಾನೂನು ಮತ್ತು ನ್ಯಾಯ ಸಚಿವಾಲಯ**

**(ಶಾಸನ ವಿಭಾಗ)**

*ನವದೆಹಲಿ, 27 ಸೆಪ್ಟೆಂಬರ್, 2020/* ಆಶ್ವಯುಜ 5, *1942 (ಶಕ)*

ಈ ಮುಂದಿನ ಅಧಿನಿಯಮಕ್ಕೆ 24 ಸೆಪ್ಟೆಂಬರ್ 2020 ರಂದು ರಾಷ್ಟ್ರಪತಿಯವರ ಅನುಮೋದನೆ ದೊರೆತಿದ್ದು ಅದನ್ನು ಸಾಮಾನ್ಯ ಮಾಹಿತಿಗಾಗಿ ಇಲ್ಲಿ ಪ್ರಕಟಿಸಲಾಗಿದೆ:-

## ರೈತರ ಉತ್ಪನ್ನ ವ್ಯಾಪಾರ ಮತ್ತು ವಾಣಿಜ್ಯ (ಉತ್ತೇಜನ ಮತ್ತು ಸೌಲಭ್ಯ) ಅಧಿನಿಯಮ, 2020

**2020 ರ 21ನೆಯದು**

[24 ಸೆಪ್ಟೆಂಬರ್, 2020]

ರೈತರ ಉತ್ಪನ್ನಗಳನ್ನು ಮಾರುವ ಮತ್ತು ಕೊಳ್ಳುವ ಸಂಬಂಧದಲ್ಲಿ ಸ್ಪರ್ಧಾತ್ಮಕ ಪರ್ಯಾಯ ವ್ಯಾಪಾರ ಮಾರ್ಗಗಳ ಮೂಲಕ ಬೆಲೆಗಳು ದೊರೆಯಲು ನೆರವಾಗುವ ಸಲುವಾಗಿ ರೈತರು ಮತ್ತು ವ್ಯಾಪಾರಿಗಳಿಗೆ ಆಯ್ಕೆಯ ಸ್ವಾತಂತ್ರ್ಯ ಲಭ್ಯವಾಗಿಸಲು; ರಾಜ್ಯಗಳ ವಿವಿಧ ಕೃಷಿ ಉತ್ಪನ್ನ ಮಾರುಕಟ್ಟೆ ವಿಧೇಯಕಗಳಡಿ ಘೋಷಿಸಲಾದ ಮಾರುಕಟ್ಟೆಗಳ ಅಥವಾ ಪರಿಗಣಿತ ಮಾರುಕಟ್ಟೆಗಳ (deemed markets) ಭೌತಿಕ ಆವರಣಗಳಿಂದ ಹೊರಗೆ ಕೃಷಿ ಉತ್ಪನ್ನಗಳ ದಕ್ಷ, ಪಾರದರ್ಶಕ ಮತ್ತು ನಿರ್ಬಂಧರಹಿತ ಅಂತಾರಾಜ್ಯ ಹಾಗೂ ಅಂತರರಾಜ್ಯ ವ್ಯಾಪಾರ ಮತ್ತು ವಾಣಿಜ್ಯವನ್ನು ಉತ್ತೇಜಿಸಲು; ವಿದ್ಯುನ್ಮಾನ ವ್ಯಾಪಾರಕ್ಕೆ ಮತ್ತು ತತ್ಸಂಬಂಧಿ ಅಥವಾ ತತ್ಪರಿಣಾಮವಾದ ವಿಷಯಗಳಿಗೆ ಅನುವಾಗುವ ವ್ಯವಸ್ಥೆಯನ್ನು ಒದಗಿಸಲು ಅಧಿನಿಯಮ.

ಇದನ್ನು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಈ ಮುಂದಿನಂತೆ ಲೋಕಸಭೆಯು (ಪಾರ್ಲಿಮೆಂಟ್) ಶಾಸನಪಡಿಸಲಿ:-

**ಅಧ್ಯಾಯ 1**

**ಪೀಠಿಕೆ**

**ಸಂಕ್ಷಿಪ್ತ ಶೀರ್ಷಿಕೆ ಮತ್ತು ಆರಂಭ**

**1.** (1) ಈ ಅಧಿನಿಯಮವನ್ನು ರೈತರ ಉತ್ಪನ್ನ ವ್ಯಾಪಾರ ಮತ್ತು ವಾಣಿಜ್ಯ (ಉತ್ತೇಜನ ಮತ್ತು ಸೌಲಭ್ಯ) ಸುಗ್ರೀವಾಜ್ಞೆ, 2020(ಉತ್ತೇಜನ ಮತ್ತು ಸೌಲಭ್ಯ) ಅಧಿನಿಯಮ, 2020 ಎಂದು ಕರೆಯಬಹುದು.

(2) ಇದು 5 ಜೂನ್ 2020 ರಿಂದ ಜಾರಿಗೆ ಬಂದಿದೆಯೆಂದು ಪರಿಗಣಿಸತಕ್ಕದ್ದು.

*ವ್ಯಾಖ್ಯೆಗಳು (Definitions)*

**2.** ಸಂದರ್ಭ ಬೇರೆಯಾಗಿರದಿದ್ದಲ್ಲಿ ಈ ಅಧಿನಿಯಮದಲ್ಲಿ,

(ಎ) "ವಿದ್ಯುನ್ಮಾನ ವ್ಯಾಪಾರ ಮತ್ತು ವಹಿವಾಟು ವೇದಿಕೆ' ಎಂದರೆ ನೇರ ಮತ್ತು ವಿದ್ಯುನ್ಮಾನ ವ್ಯವಸ್ಥೆಯ ಮೂಲಕ (online) ರೈತರ ಉತ್ಪನ್ನಗಳನ್ನು ವಿದ್ಯುನ್ಮಾನ ಸಲಕರಣೆಗಳ ಜಾಲದ ಮೂಲಕ ಮತ್ತು ಅಂತರ್ಜಾಲ ಸೌಲಭ್ಯಗಳ (applications) ಮೂಲಕ ಖರೀದಿ ಮತ್ತು ಮಾರಾಟದ ಸೌಲಭ್ಯಗಳನ್ನು ಕಲ್ಪಿಸುವ ಒಂದು ವೇದಿಕೆ. ಇಲ್ಲಿ ಪ್ರತಿಯೊಂದು ವಹಿವಾಟೂ ರೈತರ ಉತ್ಪನ್ನದ ಭೌತಿಕ ಬಟವಾಡೆಯಾಗುತ್ತದೆ.

(ಬಿ) "ರೈತ" ಎಂದರೆ ರೈತರ ಉತ್ಪನ್ನವನ್ನು ಸ್ವತಃ ಅಥವಾ ಗುತ್ತಿಗೆ ಕೂಲಿ ಅಥವಾ ಬೇರೆ ರೀತಿಯಲ್ಲಿ ಉತ್ಪಾದಿಸುವ ವ್ಯಕ್ತಿ, ಮತ್ತು ಇದು ಉತ್ಪಾದಕ ರೈತರ ಸಂಸ್ಥೆಯನ್ನೂ ಒಳಗೊಳ್ಳುತ್ತದೆ;

(ಸಿ) "ರೈತರ ಉತ್ಪನ್ನ" ಎಂದರೆ,-

(i) ಗೋಧಿ, ಅಕ್ಕಿ ಅಥವಾ ಇತರ ಏಕದಳಧಾನ್ಯಗಳು, ಕಿರುಕಾಳುಗಳು, ಬೇಳೆಕಾಳುಗಳು, ಖಾದ್ಯ ಎಣ್ಣೆಬೀಜಗಳು, ಎಣ್ಣೆಗಳು, ತರಕಾರಿಗಳು, ಹಣ್ಣುಗಳು, ಕಾಯಿಗಳು, ಸಾಂಬಾರ ಪದಾರ್ಥಗಳು, ಕಬ್ಬು ಮತ್ತು ಸ್ವಾಭಾವಿಕ ಅಥವಾ ಸಂಸ್ಕರಿತ ರೂಪದಲ್ಲಿರುವ ಕೋಳಿಸಾಕಣೆ, ಕುರಿಸಾಕಣೆ, ಹಂದಿಸಾಕಣೆ ಕ್ಷೀರೋದ್ಯಮ ಮುಂತಾದವುಗಳ ಜನಬಳಕೆಯ ಉತ್ಪನ್ನಗಳು;

(ii) ಹಿಂಡಿ ಮತ್ತು ಇತರ ಸಾರಭೂತಗಳನ್ನೂ ಒಳಗೊಂಡಂತೆ ಜಾನುವಾರು ಆಹಾರ; ಮತ್ತು

(iii) ಕಚ್ಚಾ ಹತ್ತಿ ಹಿಂಜಿದ ಅಥವಾ ಹಿಂಜದ, ಹತ್ತಿ ಬೀಜಗಳು ಮತ್ತು ಕಚ್ಚಾ ಸೆಣಬು,

(ಡಿ) "ಉತ್ಪಾದಕ ರೈತರ ಸಂಸ್ಥೆ" ಎಂದರೆ, ಅದನ್ನು ಯಾವ ಹೆಸರಿನಿಂದ ಕರೆಯಲಾದರೂ,

(i) ಪ್ರಸ್ತುತ ಜಾರಿಯಲ್ಲಿರುವ ಯಾವುದೇ ಕಾನೂನಿನಡಿ ನೋದಾಯಿತವಾದ; ಅಥವಾ

(ii) ಕೇಂದ್ರ ಅಥವಾ ರಾಜ್ಯ ಸರಕಾರ ಒಂದುಂ ಯೋಜನೆ ಅಥವಾ ಕಾರ್ಯಕ್ರಮದಡಿ ಪ್ರಾಯೋಜಿಸಿದ- ರೈತರ ಒಂದು ಸಂಘ ಅಥವಾ ಗುಂಪು

(ಇ) “ಅಂತರರಾಜ್ಯ ವ್ಯಾಪಾರ” ಎಂದರೆ ರಾಜ್ಯವೊಂದರ ವ್ಯಾಪಾರಿಯೊಬ್ಬ ಇನ್ನೊಂದು ರಾಜ್ಯದ ಒಬ್ಬ ರೈತ ಅಥವಾ ವ್ಯಾಪಾರಿಯಿಂದ ರೈತರ ಉತ್ಪನ್ನವನ್ನು ಕೊಳ್ಳುವುದು ಅಥವಾ ಮಾರುವುದು ಮತ್ತು ಆ ಉತ್ಪನ್ನವನ್ನು ವ್ಯಾಪಾರಿಯು ಖರೀದಿಮಾಡಿದ ಅಥವಾ ರೈತರ ಉತ್ಪನ್ನವನ್ನು ಉತ್ಪಾದಿಸಲಾದ ರಾಜ್ಯವಲ್ಲದೆ ಬೇರೆ ರಾಜ್ಯಕ್ಕೆ ಸಾಗಿಸಲಾಗಿರುವುದು;

(ಎಫ್) “ಅಂತಾರಾಜ್ಯ ವ್ಯಾಪಾರ” ಎಂದರೆ ರಾಜ್ಯವೊಂದರ ವ್ಯಾಪಾರಿಯೊಬ್ಬ ಅದೇ ರಾಜ್ಯದ ಒಬ್ಬ ರೈತ ಅಥವಾ ವ್ಯಾಪಾರಿಯಿಂದ ರೈತರ ಉತ್ಪನ್ನವನ್ನು ಕೊಳ್ಳುವುದು ಅಥವಾ ಮಾರುವುದು ಮತ್ತು ಆ ರೈತರ ಉತ್ಪನ್ನವನ್ನು ವ್ಯಾಪಾರಿಯು ಖರೀದಿಮಾಡಿದ ರಾಜ್ಯ ಅಥವಾ ರೈತರ ಉತ್ಪನ್ನವನ್ನು ಉತ್ಪಾದಿಸಲಾದ ರಾಜ್ಯ ಒಂದೇ ಆಗಿರುವುದು;

(ಜಿ) “ಅಧಿಸೂಚನೆ” ಎಂದರೆ ಕೇಂದ್ರ ಸರಕಾರ ಅಥವಾ ರಾಜ್ಯ ಸರಕಾರಗಳು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆಗಳು; “ಅಧಿಸೂಚಿಸು” ಮತ್ತು “ಅಧಿಸೂಚಿಸಲಾಗಿದೆ” ಎಂಬ ಪದಗಳನ್ನು ಇದಕ್ಕನುಗುಣವಾಗಿ ತಿಳಿಯತಕ್ಕದ್ದು.

(ಎಚ್) “ವ್ಯಕ್ತಿ” ಇವುಗಳನ್ನು ಒಳಗೊಳ್ಳುತ್ತದೆ -

(ಎ) ಒಬ್ಬ ವ್ಯಕ್ತಿ;

(ಬಿ) ಒಂದು ಪಾಲುದಾರಿಕೆ ಸಂಸ್ಥೆ; (ಸಿ) ಒಂದು ಕಂಪನಿ;

(ಡಿ) ಒಂದು ಸೀಮಿತ ಹೊಣೆ ಪಾಲುದಾರಿಕೆ;

(ಇ) ಒಂದು ಸಹಕಾರ ಸಂಘ;

(ಎಫ್) ಒಂದು ಸಂಘ; ಅಥವಾ

(ಜಿ) ಕೇಂದ್ರ ಸರಕಾರ ಅಥವಾ ರಾಜ್ಯ ಸರಕಾರದ ಚಾಲ್ತಿ ಕಾರ್ಯಕ್ರಮಗಳಡಿ ರಚಿಸಲಾದ ಅಥವಾ ಮಾನ್ಯಮಾಡಲಾದ ಯಾವುದೇ ಸಂಘ ಅಥವಾ ವ್ಯಕ್ತಿಗಳ ಸಮೂಹ.

(ಐ) “ನಿಗದಿತ” ಎಂದರೆ ಕೇಂದ್ರಸರಕಾರವು ಈ ಅಧಿನಿಯಮದಡಿ ರಚಿಸಿದ ನಿಯಮಗಳಿಂದ ನಿಗದಿತವಾದದ್ದು.

(ಜೆ) “ಪರಿಶಿಷ್ಟಿತ ರೈತರ ಉತ್ಪನ್ನ” ಎಂದರೆ ಯಾವುದೇ ರಾಜ್ಯದ APMC ಅಧಿನಿಯಮದಡಿ ನಿಯಂತ್ರಣಕ್ಕಾಗಿ ನಿರ್ದಿಷ್ಟಪಡಿಸಿದ ಕೃಷಿ ಉತ್ಪನ್ನ.

(ಕೆ) “ರಾಜ್ಯ” ಪದವು ಕೇಂದ್ರಾಡಳಿತ ಪ್ರದೇಶವನ್ನೂ ಒಳಗೊಳ್ಳುತ್ತದೆ;

(ಎಲ್) “ರಾಜ್ಯ ಎಪಿಎಂಸಿ ಅಧಿನಿಯಮ” ಎಂದರೆ, ಅದನ್ನು ಯಾವುದೇ ಹೆಸರಿನಿಂದ ಕರೆದಿರಲಿ, ಒಂದು ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆಯನ್ನು ನಿಯಂತ್ರಿಸುವ ಭಾರತದಲ್ಲಿ ಜಾರಿಯಲ್ಲಿರುವ ಯಾವುದೇ ರಾಜ್ಯದ ಶಾಸನ ಅಥವಾ ಕೇಂದ್ರಾಡಳಿತ ಪ್ರದೇಶದ ಶಾಸನ;

(ಎಂ) “ವ್ಯಾಪಾರ ಪ್ರದೇಶ” ಎಂದರೆ,

(ಎ) ಒಕ್ಕಲು ಜಮೀನು;

(ಬಿ) ಕಾರ್ಖಾನೆಯ ಆವರಣ;

(ಸಿ) ಮಳಿಗೆಗಳು;

(ಡಿ) ಹಗೇವುಗಳು;

(ಇ) ಶೈತ್ಯಾಗಾರಗಳು; ಅಥವಾ

(ಎಫ್) ಇತರ ಯಾವುದೇ ರಚನೆಗಳು ಅಥವಾ ಸ್ಥಳಗಳು

-ಇವುಗಳನ್ನೂ ಒಳಗೊಂಡಂತೆ, ರೈತರ ಉತ್ಪನ್ನದ ವ್ಯಾಪಾರ ನಡೆಸಬಹುದಾದ ಭಾರತದಲ್ಲಿರುವ ಯಾವುದೇ ಪ್ರದೇಶ ಅಥವಾ ಸ್ಥಳ, ಉತ್ಪಾದನೆಯ, ಸಂಗ್ರಹಣೆ ಮತ್ತು ಒಟ್ಟುಗೂಡಿಕೆಯ ಸ್ಥಳ, ಆದರೆ-

(i) ಭಾರತದಲ್ಲಿ ಜಾರಿಯಲ್ಲಿರುವ ವಿವಿಧ ರಾಜ್ಯಗಳ ಎಪಿಎಂಸಿಅ ಅಧಿನಿಯಮದಡಿ ರಚಿಸಲಾದ ಮಾರಾಟ ಸಮಿತಿಗಳು ನಿರ್ವಹಿಸಿ ನಡೆಸುತ್ತಿರುವ ಮಾರುಕಟ್ಟೆ ಆವರಣ, ಉಪ-ಮಾರುಕಟ್ಟೆ ಆವರಣ ಮತ್ತು ಮಾರುಕಟ್ಟೆ ಉಪ-ಆವರಣಗಳ ಭೌತಿಕ ಎಲ್ಲೆಗಳು; ಮತ್ತು

(ii) ಖಾಸಗಿ ಮಾರುಕಟ್ಟೆ ಆವರಣಗಳು, ಖಾಸಗಿ ಮಾರುಕಟ್ಟೆ ಉಪ-ಆವರಣಗಳು, ನೇರ ಮಾರಾಟ ಸಂಗ್ರಹಣಾ

ಕೇಂದ್ರಗಳು ಮತ್ತು ಪರವಾನಗಿ ಹೊಂದಿದ ವ್ಯಕ್ತಿಗಳು ನಿರ್ವಹಿಸುವ ಖಾಸಗಿ ರೈತ-ಬಳಕೆದಾರ ಮಾರಾಟ ಕೇಂದ್ರಗಳು ಅಥವಾ ಭಾರತದಲ್ಲಿ ಜಾರಿಯಲ್ಲಿರುವ ವಿವಿಧ ರಾಜ್ಯಗಳ APMC ಅಧಿನಿಯಮದ ಪ್ರಕಾರ ಮಾರುಕಟ್ಟೆಗಳು ಅಥವಾ ಪರಿಗಣಿತ ಮಾರುಕಟ್ಟೆಗಳು ಎಂದು ಅಧಿಸೂಚಿಸಲಾದ ಯಾವುದೇ ಮಳಿಗೆಗಳು, ಹಗೇವುಗಳು, ಶೈತ್ಯಾಗಾರಗಳು ಮತ್ತು ಇತರ ರಚನೆಗಳು ಅಥವಾ ಆವರಣಗಳು ಮತ್ತು ಕಟ್ಟಡಗಳು ಇದರಲ್ಲಿ ಸೇರುವುದಿಲ್ಲ.

(ಎನ್) "ವ್ಯಾಪಾರಿ" ಎಂದರೆ ಅಂತರ-ರಾಜ್ಯ ವ್ಯಾಪಾರ ಅಥವಾ ಅಂತಾರಾಜ್ಯ ವ್ಯಾಪಾರ ಅಥವಾ ಅವೆರಡೂ ಸೇರಿದ ವ್ಯಾಪಾರದ ಮೂಲಕ ಸಗಟು ವ್ಯಾಪಾರ, ಚಿಲ್ಲರೆ ವ್ಯಾಪಾರ, ಅಂತಿಮ ಬಳಕೆ, ಮೌಲ್ಯವರ್ಧನೆ, ಸಂಸ್ಕರಣೆ, ಉತ್ಪಾದನೆ, ರಫ್ತು, ಬಳಕೆ ಅಥವಾ ಇಂಥ ಇತರ ಉದ್ದೇಶಕ್ಕಾಗಿ ತನಗಾಗಿ ಅಥವಾ ಬೇರೊಬ್ಬ ವ್ಯಕ್ತಿಯ ಅಥವಾ ಹಲವು ವ್ಯಕ್ತಿಗಳ ಪರವಾಗಿ ರೈತರ ಉತ್ಪನ್ನವನ್ನು ಕೊಳ್ಳುವವನು,

## ಅಧ್ಯಾಯ 2

## ರೈತರ ಉತ್ಪನ್ನದ ವ್ಯಾಪಾರ ಮತ್ತು ವಾಣಿಜ್ಯಕ್ಕೆ ಉತ್ತೇಜನ ಮತ್ತು ಸೌಲಭ್ಯ

*ವ್ಯಾಪಾರ ಪ್ರದೇಶವೊಂದರಲ್ಲಿ ವ್ಯಾಪಾರ ಮತ್ತು ವಾಣಿಜ್ಯ ನಡೆಸುವ ಸ್ವಾತಂತ್ರ್ಯ*

**3.** ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟಂತೆ, ಯಾವುದೇ ರೈತ ಅಥವಾ ವ್ಯಾಪಾರಿ ಅಥವಾ ವಿದ್ಯುನ್ಮಾನ ವ್ಯಾಪಾರ ಮತ್ತು ವಹಿವಾಟು ವೇದಿಕೆಯು ವ್ಯಾಪಾರ ಪ್ರದೇಶವೊಂದರಲ್ಲಿ ಅಂತರ-ರಾಜ್ಯ ಅಥವಾ ಅಂತಾರಾಜ್ಯ ವ್ಯಾಪಾರ ನಡೆಸುವ ಸ್ವಾತಂತ್ರ್ಯ ಹೊಂದಿರತಕ್ಕದ್ದು.

*ಪರಿಶಿಷ್ಟಿತ ರೈತರ ಉತ್ಪನ್ನದ ವ್ಯಾಪಾರ ಮತ್ತು ವಾಣಿಜ್ಯ*

**4.** (1) ಯಾವುದೇ ವ್ಯಾಪಾರಿಯು ಒಂದು ವ್ಯಾಪಾರ ಪ್ರದೇಶದಲ್ಲಿ ಒಬ್ಬ ರೈತನೊಂದಿಗೆ ಅಥವಾ ಇನ್ನೊಬ್ಬ ವ್ಯಾಪಾರಿಯೊಂದಿಗೆ ರೈತರ ಉತ್ಪನ್ನಗಳ ಅಂತರ-ರಾಜ್ಯ ವ್ಯಾಪಾರ ಅಥವಾ ಅಂತಾರಾಜ್ಯ ವ್ಯಾಪಾರದಲ್ಲಿ ತೊಡಗಬಹುದು.

*1961 ರ 43*

ಆದರೆ- ರೈತ ಉತ್ಪಾದಕ ಸಂಸ್ಥೆಗಳು ಅಥವಾ ವ್ಯವಸಾಯ ಸಹಕಾರ ಸಂಘವನ್ನು ಹೊರತುಪಡಿಸಿ 1961ರ ಆದಾಯ ತೆರಿಗೆ ಅಧಿನಿಯಮದಡಿ ನೀಡಲಾದ ಶಾಶ್ವತ ಖಾತಾ ಸಂಖ್ಯೆ (PAN) ಅಥವಾ ಕೇಂದ್ರ ಸರಕಾರ ಸೂಚಿಸಿದ ಇಂಥ

ಇತರ ಯಾವುದೇ ದಸ್ತಾವೇಜನ್ನು ಹೊಂದಿರದ ವ್ಯಾಪಾರಿಯು ಯಾವುದೇ ಪರಿಶಿಷ್ಟಿತ ರೈತ ಉತ್ಪನ್ನದ ವ್ಯಾಪಾರ ಮಾಡುವಂತಿಲ್ಲ.

(2) ಕೇಂದ್ರ ಸರಕಾರವು, ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೆ ಮಾಡಬೇಕಾದ್ದು ಅಗತ್ಯ ಮತ್ತು ತುರ್ತು ಎಂದು ಭಾವಿಸಿದರೆ, ವ್ಯಾಪಾರಿಯೊಬ್ಬನಿಗೆ ವಿದ್ಯುನ್ಮಾನ ನೋಂದಾವಣೆಯ ವ್ಯವಸ್ಥೆಯನ್ನು ಮತ್ತು ಒಂದು ವ್ಯಾಪಾರ ಪ್ರದೇಶದಲ್ಲಿ ರೈತರ ಉತ್ಪನ್ನಗಳಿಗೆ ಪಾವತಿ ಮಾಡುವ ವಿಧಾನವನ್ನು ನಿಗದಿಪಡಿಸಬಹುದು.

(3) ರೈತರೊಡನೆ ವಹಿವಾಟು ನಡೆಸುವ ಪ್ರತಿಯೊಬ್ಬ ವ್ಯಾಪಾರಿಯೂ ವ್ಯಾಪಾರವಾದ ಪರಿಶಿಷ್ಟಿತ ರೈತರ ಉತ್ಪನ್ನಕ್ಕೆ ಅದೇ ದಿನ ಅಥವಾ ಕಾರ್ಯವಿಧಾನದಂತೆ ಅಗತ್ಯವಾದಲ್ಲಿ ಬಾಕಿ ಹಣವನ್ನು ನಮೂದಿಸಿ ಬಟವಾಡೆ ಸ್ವೀಕರಿಸಿದ ರಸೀತಿಯನ್ನು ರೈತನಿಗೆ ಅದೇ ದಿನ ನೀಡಿ, ಗರಿಷ್ಠ ಮೂರು ಕೆಲಸದ ದಿನಗಳೊಳಗಾಗಿ ಪಾವತಿ ಮಾಡತಕ್ಕದ್ದು.

ಆದರೆ ಅವನ್ನು ಯಾವ ಹೆಸರಿನಿಂದಲಾದರೂ ಕರೆದರೂ, ರೈತರ ಉತ್ಪನ್ನ ಸಂಸ್ಥೆಗಳ ಅಥವಾ ವ್ಯವಸಾಯ ಸಹಕಾರ ಸಂಘವು ಮಾಡಬೇಕಾದ ಪಾವತಿಗೆ ಖರೀದಿದಾರರಿಂದ ಪಾವತಿಯ ಸ್ವೀಕಾರಕ್ಕೆ ಸಂಬಂಧಿಸಿದಂತೆ ಕೇಂದ್ರ ಸರಕಾರವು ಬೇರೆ ವಿಧಾನವನ್ನು ನಿಗದಿಪಡಿಸಬಹುದು.

*1861 ರ 43*

**5.** (1) 1961ರ ಆದಾಯ ತೆರಿಗೆ ಇಲಾಖೆಯು ನೀಡಿದ ಶಾಶ್ವತ ಖಾತಾ ಸಂಖ್ಯೆ ಅಥವಾ ಕೇಂದ್ರ ಸರಕಾರವು ಸೂಚಿಸುವ ಅಂಥ ಇತರ ದಾಖಲೆ ಹೊಂದಿರುವ (ಏಕವ್ಯಕ್ತಿಯನ್ನುಳಿದು) ಯಾವುದೇ ವ್ಯಕ್ತಿ, ಯಾವುದೇ ರೈತ ಉತ್ಪನ್ನ ಸಂಸ್ಥೆ ಅಥವಾ ವ್ಯವಸಾಯ ಸಹಕಾರ ಸಂಘವು ವ್ಯಾಪಾರ ಪ್ರದೇಶವೊಂದರಲ್ಲಿ ಪರಿಶಿಷ್ಟಿತ ರೈತರ ಉತ್ಪನ್ನದ ಅಂತರ-ರಾಜ್ಯ ಅಥವಾ ಅಂತಾರಾಜ್ಯ ವ್ಯಾಪಾರದ ಸೌಲಭ್ಯಕ್ಕಾಗಿ ವಿದ್ಯುನ್ಮಾನ ವ್ಯಾಪಾರ ಮತ್ತು ವಹಿವಾಟು ವೇದಿಕೆಯೊಂದನ್ನು ಸ್ಥಾಪಿಸಬಹುದು ಮತ್ತು ನಿರ್ವಹಿಸಬಹುದು.

ಆದರೆ, ವಿದ್ಯುನ್ಮಾನ ವ್ಯಾಪಾರ ಮತ್ತು ವಹಿವಾಟು ವೇದಿಕೆಯನ್ನು ಸ್ಥಾಪಿಸುವ ಮತ್ತು ನಿರ್ವಹಿಸುವ ವ್ಯಕ್ತಿಯು ... ವ್ಯಾಪಾರದ ವಿಧಾನ, ಶುಲ್ಕಗಳು, ಇತರ ವೇದಿಕೆಗಳೊಂದಿಗೆ ಪರಸ್ಪರ-ವ್ಯವಹಾರಸಾಧ್ಯತೆ, ಮೂಲಸೌಲಭ್ಯಗಳ ವ್ಯವಸ್ಥೆ, ಗುಣಮಟ್ಟ ನಿರ್ಧಾರಣ, ಸಕಾಲಿಕ ಪಾವತಿ, ವೇದಿಕೆಯು ಕಾರ್ಯಾಚರಣೆ ನಡೆಸುವ ಸ್ಥಳದ ಭಾಷೆಯಲ್ಲಿ ಪ್ರಚುರಪಡಿಸುವುದು ಇವುಗಳನ್ನೊಳಗೊಂಡಂತೆ ತಾಂತ್ರಿಕ ಮಾನದಂಡಗಳು ಮತ್ತು ಇಂಥ ಇತರ ಸಂಗತಿಗಳನ್ನು ಕುರಿತಂತೆ ಮಾರ್ಗದರ್ಶಿ ಸೂತ್ರಗಳನ್ನು ತಯಾರಿಸಿ ಜಾರಿಗೆ ತರತಕ್ಕದ್ದು.

(2) ಸಾರ್ವಜನಿಕ ಹಿತದೃಷ್ಟಿಯಿಂದ ಕೇಂದ್ರ ಸರಕಾರವು ಹಾಗೆ ಮಾಡುವುದು ಅಗತ್ಯ ಮತ್ತು ತುರ್ತು ಎಂದು ಭಾವಿಸಿದರೆ, ವಿದ್ಯುನ್ಮಾನ ವ್ಯಾಪಾರ ವೇದಿಕೆಗಳಿಗೆ, ನಿಯಮಗಳ ಮೂಲಕ ವ್ಯಾಪಾರ ಪ್ರದೇಶದಲ್ಲಿ ರೈತರ ಉತ್ಪನ್ನಗಳ ನ್ಯಾಯಯುತ ಅಂತರ-ರಾಜ್ಯ ಹಾಗೂ ಅಂತಾರಾಜ್ಯ ವ್ಯಾಪಾರ ಮತ್ತು ವಾಣಿಜ್ಯವನ್ನು ಸುಗಮಗೊಳಿಸಲು-

(ಎ) ಕಾರ್ಯವಿಧಾನ, ಮಾನದಂಡಗಳು ಮತ್ತು ನೋಂದಾವಣೆಯ ವಿಧಾನವನ್ನು ನಿರ್ದಿಷ್ಟಪಡಿಸಬಹುದು; ಮತ್ತು

(ಬಿ) ನಡವಳಿಕೆಯ ಸಂಹಿತೆ, ಇತರ ವೇದಿಕೆಗಳೊಂದಿಗೆ ಪರಸ್ಪರ ವ್ಯವಹಾರಸಾಧ್ಯತೆ ಮತ್ತು ಮೂಲಸೌಕರ್ಯ ವ್ಯವಸ್ಥೆ ಮತ್ತು ಪರಿಶಿಷ್ಟಿತ ರೈತ ಉತ್ಪನ್ನದ ಗುಣಮಟ್ಟ ನಿರ್ಧಾರಣ ವ್ಯಾಪಾರ ವಹಿವಾಟಿನ ರೀತಿಗಳು-ಇವನ್ನು ಒಳಗೊಂಡಂತೆ ತಾಂತ್ರಿಕ ಮಾನದಂಡಗಳು ಮತ್ತು ಪಾವತಿಯ ವಿಧಾನವನ್ನು ನಿರ್ದಿಷ್ಟಪಡಿಸಬಹುದು.

*ವ್ಯಾಪಾರ ಪ್ರದೇಶದಲ್ಲಿ ರಾಜ್ಯ ಎಪಿಎಂಸಿ ಅಧಿನಿಯಮ ಇತ್ಯಾದಿಗಳಡಿ ಮಾರುಕಟ್ಟೆ ಶುಲ್ಕ*

**6.** ಯಾವುದೇ ರೈತ ಅಥವಾ ವ್ಯಾಪಾರಿ ಅಥವಾ ವ್ಯಾಪಾರ ಪ್ರದೇಶವೊಂದರಲ್ಲಿ ರೈತರ ಉತ್ಪನ್ನಗಳ ವ್ಯಾಪಾರ ಹಾಗೂ ವಾಣಿಜ್ಯ ಉದ್ದೇಶದ ವಿದ್ಯುನ್ಮಾನ ವ್ಯಾಪಾರ ಮತ್ತು ವಹಿವಾಟು ವೇದಿಕೆಯ ಮೇಲೆ ಯಾವುದೇ ರಾಜ್ಯದ APMC ಅಧಿನಿಯಮ ಅಥವಾ ರಾಜ್ಯದ ಇತರ ಯಾವುದೇ ಕಾನೂನಿನಡಿ ಮಾರುಕಟ್ಟೆ ಶುಲ್ಕ ಅಥವಾ ವಸೂಲಿ (ಲೆವಿ), ಅದನ್ನು ಯಾವುದೇ ಹೆಸರಿನಿಂದ ಕರೆಯಲಾದರೂ, ವಿಧಿಸತಕ್ಕದ್ದಲ್ಲ.

*ಬೆಲೆ ಮಾಹಿತಿ ಮತ್ತು ಮಾರುಕಟ್ಟೆ ಸಮಾಚಾರ ವ್ಯವಸ್ಥೆ*

**7.** (1) ಕೇಂದ್ರ ಸರಕಾರವು, ಕೇಂದ್ರ ಸರಕಾರದ ಯಾವುದೇ ಸಂಸ್ಥೆಯ .ಮೂಲಕ, ರೈತರ ಉತ್ಪನ್ನಕ್ಕೆ ಬೆಲೆ ಮಾಹಿತಿ ಮತ್ತು ಮಾರುಕಟ್ಟೆ ಸಮಾಚಾರ ವ್ಯವಸ್ಥೆಯನ್ನು ಅವುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪ್ರಚುರಪಡಿಸಲು ಒಂದು ಚೌಕಟ್ಟನ್ನು ನಿರ್ಮಿಸಬಹುದು,

(2) ವಿದ್ಯುನ್ಮಾನ ವ್ಯಾಪಾರ ಮತ್ತು ವಹಿವಾಟು ವೇದಿಕೆಯನ್ನು ಹೊಂದಿರುವ ಮತ್ತು ನಿರ್ವಹಿಸುತ್ತಿರುವ ಯಾವುದೇ ವ್ಯಕ್ತಿಯನ್ನು ನಿಗದಿಪಡಿಸಲಾದ ರೀತಿಯ ವಹಿವಾಟುಗಳನ್ನು ಕುರಿತ ಮಾಹಿತಿ ಒದಗಿಸುವಂತೆ ಕೇಂದ್ರ ಸರಕಾರವು ಕೇಳಬಹುದು.

*ವಿವರಣೆ*- ಈ ಪ್ರಕರಣದ ಉದ್ದೇಶಗಳಿಗೆ, "ಕೇಂದ್ರ ಸರಕಾರದ ಸಂಸ್ಥೆಗಳು" ಎಂಬ ಪದವು ಯಾವುದೇ ಅಧೀನ ಅಥವಾ ಅನುಬಂಧಿತ ಕಚೇರಿ, ಸರಕಾರ ಸ್ವಾಮ್ಯದ ಅಥವಾ ಸರಕಾರವು ಪ್ರವರ್ತಿಸಿದ ಕಂಪನಿ ಅಥವಾ ಸಂಘವನ್ನು ಒಳಗೊಳ್ಳುತ್ತದೆ.

## ಅಧ್ಯಾಯ 3
## ವಿವಾದ ನಿರ್ಣಯ

*ರೈತರಿಗಾಗಿ ವಿವಾದ ನಿರ್ಣಯ ವ್ಯವಸ್ಥೆ*

**8.** (1) ಈ ಅಧಿನಿಯಮದ 4ನೇ ಪ್ರಕರಣದಂತೆ ರೈತ ಮತ್ತು ವ್ಯಾಪಾರಿಯೊಬ್ಬನ ನಡುವಿನ ವಹಿವಾಟೊಂದರಲ್ಲಿ ಉಂಟಾದ ಯಾವುದೇ ವಿವಾದದ ಸಂಬಂಧದಲ್ಲಿ, ಕಕ್ಷಿಗಳು ಉಪ-ವಿಭಾಗೀಯ ಮ್ಯಾಜಿಸ್ಟ್ರೇಟ್ ಅವರಲ್ಲಿ ಅರ್ಜಿ ಸಲ್ಲಿಸಿ ಸಂಧಾನದ ಮೂಲಕ ಪರಸ್ಪರ ಸಮ್ಮತವಾಗುವ ಪರಿಹಾರ ಕೋರಬಹುದು. ಮ್ಯಾಜಿಸ್ಟ್ರೇಟರು ಅಂಥ ವಿವಾದವನ್ನು ಆಲಿಸಿ ನಿರ್ಬಂಧಕವಾಗಿ ಇತ್ಯರ್ಥಪಡಿಸಲು (ಬೈಂಡಿಂಗ್ ಸೆಟ್ಲ್ ಮೆಂಟ್) ತಾವು ನೇಮಿಸಿದ ಸಂಧಾನ ಮಂಡಲಿಗೆ (conciliation board) ಕಳಿಸಬಹುದು.

(2) ಉಪ ವಿಭಾಗೀಯ ಮ್ಯಾಜಿಸ್ಟ್ರೇಟರಿಂದ ಉಪವಿಧಿ (1) ರಂತೆ ನೇಮಕವಾದ ಪ್ರತಿಯೊಂದು ಸಂಧಾನ ಮಂಡಲಿಯಲ್ಲೂ (conciliation board) ಒಬ್ಬ ಅಧ್ಯಕ್ಷ ಮತ್ತು ಉಪ-ವಿಭಾಗೀಯ ಮ್ಯಾಜಿಸ್ಟ್ರೇಟರು ಯುಕ್ತವೆಂದು ಭಾವಿಸುವ ಎರಡಕ್ಕಿಂತ ಕಡಿಮೆಯಲ್ಲದಷ್ಟು ಹಾಗೂ ನಾಲ್ಕಕ್ಕಿಂತ ಹೆಚ್ಚಲ್ಲದಷ್ಟು ಸಂಖ್ಯೆಯ ಸದಸ್ಯರಿರುತ್ತಾರೆ.

(3) ಅಧ್ಯಕ್ಷರು ಉಪ ವಿಭಾಗೀಯ ಮ್ಯಾಜಿಸ್ಟ್ರೇಟರ ಮೇಲುಸ್ತುವಾರಿ ಮತ್ತು ನಿಯಂತ್ರಣದಲ್ಲಿ ಸೇವೆ ಸಲ್ಲಿಸುವ ಒಬ್ಬ ಅಧಿಕಾರಿಯಾಗಿರುತ್ತಾರೆ ಮತ್ತು ಇತರ ಸದಸ್ಯರು ಕಕ್ಷಿಗಳನ್ನು ಪ್ರತಿನಿಧಿಸಲು ಸಮಾನ ಸಂಖ್ಯೆಯಲ್ಲಿ ನೇಮಕವಾದ ವ್ಯಕ್ತಿಗಳಾಗಿರುತ್ತಾರೆ ಹಾಗೂ ಒಬ್ಬ ಕಕ್ಷಿಯನ್ನು ಪ್ರತಿನಿಧಿಸಲು ನೇಮಕವಾದ ವ್ಯಕ್ತಿಯನ್ನು ಆ ಕಕ್ಷಿಯ ಶಿಫಾರಸಿನ ಮೇರೆಗೆ ನೇಮಕಮಾಡಲಾಗುತ್ತದೆ.

ಆದರೆ, ಯಾವುದೇ ಕಕ್ಷಿಯು ಏಳುದಿನಗಳೊಳಗಾಗಿ ಅಂಥ ಶಿಫಾರಸುಮಾಡಲು ವಿಫಲನಾದಲ್ಲಿ ಆ ಕಕ್ಷಿಯನ್ನು ಪ್ರತಿನಿಧಿಸಲು ಉಪ ವಿಭಾಗೀಯ ಮ್ಯಾಜಿಸ್ಟ್ರೇಟರು ತಮಗೆ ಯುಕ್ತವೆನಿಸಿದ ವ್ಯಕ್ತಿಗಳನ್ನು ನೇಮಿಸುತ್ತಾರೆ.

(4) ಯಾವುದೇ ವಿವಾದದ ಸಂಬಂಧದಲ್ಲಿ, ಸಂಧಾನ ಪ್ರಕ್ರಿಯೆಯಲ್ಲಿ ಒಂದು ಇತ್ಯರ್ಥಕ್ಕೆ ಬರಲಾದ ಸಂದರ್ಭದಲ್ಲಿ ಒಂದು ಯಥೋಚಿತವಾದ ಇತ್ಯರ್ಥ ಜ್ಞಾಪನಪತ್ರವೊಂದನ್ನು (Settlement Memorandum) ರಚಿಸಲಾಗುತ್ತದೆ ಮತ್ತು ಆ ವಿವಾದದ ಕಕ್ಷಿಗಳು ಅದಕ್ಕೆ ಸಹಿಮಾಡುತ್ತಾರೆ ಮತ್ತು ಅದು ಕಕ್ಷಿಗಳಿಗೆ ನಿರ್ಬಂಧಕವಾಗಿರುತ್ತದೆ.

(5) ಉಪವಿಧಿ (1) ರಂತೆ ವಹಿವಾಟಿನ ಕಕ್ಷಿಗಳು ವಿವಾದವನ್ನು ಈ ವಿಧಿಯಲ್ಲಿ ನಿಗದಿಪಡಿಸಿದಂತೆ ಮೂವತ್ತು ದಿನಗಳೊಳಗಾಗಿ ಇತ್ಯರ್ಥಪಡಿಸಿಕೊಳ್ಳಲು ಸಾಧ್ಯವಾಗದಿದ್ದರೆ ಅವರು ಸಂಬಂಧಪಟ್ಟ ಉಪ ವಿಭಾಗೀಯ ಮ್ಯಾಜಿಸ್ಟ್ರೇಟರಲ್ಲಿಗೆ ಮನವಿಮಾಡಿಕೊಳ್ಳಬಹುದು ಮತ್ತು ಅವರು ಈ ವಿವಾದದ "ಉಪ-ವಿಭಾಗೀಯ ಪ್ರಾಧಿಕಾರಿ"ಯಾಗಿರುತ್ತಾರೆ.

(6) ಉಪ ವಿಭಾಗೀಯ ಪ್ರಾಧಿಕಾರಿಯು ತನ್ನಷ್ಟಕ್ಕೆ ತಾನೇ ಅಥವಾ ಒಂದು ಮನವಿಯ ಮೇರೆಗೆ ಅಥವಾ ಸರಕಾರದ ಯಾವುದೇ ಅಭಿಕರಣದ (agency) ಸೂಚನೆಯ ಮೇರೆಗೆ ಪ್ರಕರಣ 4 ಅಥವಾ ಅದರಡಿ ರಚಿಸಲಾದ ನಿಯಮಗಳ ಷರತ್ತುಗಳ ಉಲ್ಲಂಘನೆಯನ್ನು ಗಮನಿಸಿ ಉಪವಿಧಿ (7) ರಂತೆ ಕ್ರಮ ಕೈಗೊಳ್ಳುತ್ತಾರೆ.

(7) ಉಪ ವಿಭಾಗೀಯ ಪ್ರಾಧಿಕಾರಿಯು ವಿವಾದವನ್ನು ಸಲ್ಲಿಸಿದ ದಿನಾಂದಿಂದ ಮೂವತ್ತು ದಿನಗಳೊಳಗಾಗಿ ವಿವಾದವನ್ನು ಅಥವಾ ಈ ಪ್ರಕರಣದಡಿಯಲ್ಲಿ ಉಲ್ಲಂಘನೆಯನ್ನು ಸಾರಾಂಶ ರೂಪದಲ್ಲಿ ನಿರ್ಣಯಿಸುತ್ತಾರೆ ಮತ್ತು ಮತ್ತು ಕಕ್ಷಿಗಳ ವಾದವನ್ನು ಸಲ್ಲಿಸಲು ಅವಕಾಶ ನೀಡಿ, ಉಪ-ವಿಭಾಗೀಯ ಪ್ರಾಧಿಕಾರಿಯು-

(ಎ) ವಿವಾದದ ಮೊತ್ತದ ವಸೂಲಾತಿಗೆ ಆದೇಶ ನೀಡಬಹುದು; ಅಥವಾ

(ಬಿ) ಪ್ರಕರಣ 1 ರ ಉಪ-ವಿಧಿ (1) ರಂತೆ ನಿಗದಿಪಡಿಸಲಾದ ದಂಡ ವಿಧಿಸಬಹುದು; ಅಥವಾ

(ಸಿ) ತನಗೆ ಯುಕ್ತವೆನಿಸಿದಷ್ಟು ಅವಧಿಯವರೆಗೆ ವಿವಾದದಲ್ಲಿನ ವ್ಯಾಪಾರಿಯು ಈ ಅಧಿನಿಯಮದಡಿಯಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ರೈತರ ಉತ್ಪನ್ನದ ಯಾವುದೇ ವ್ಯಾಪಾರ ಮತ್ತು ವಾಣಿಜ್ಯ ಕೈಗೊಳ್ಳದಿರುವಂತೆ ಆದೇಶ ನೀಡಬಹುದು.

(8) ಉಪ-ವಿಭಾಗೀಯ ಪ್ರಾಧಿಕಾರದ ಆದೇಶದಿಂದ ನೊಂದ ಯಾವುದೇ ಕಕ್ಷಿಯು ಈ ಆದೇಶ ಬಂದ ಮೂವತ್ತು ದಿನಗಳೊಳಗಾಗಿ ಮೇಲ್ಮನವಿ ನ್ಯಾಯಾಲಯ (ಕಲೆಕ್ಟರ್ ಅಥವಾ ಕಲೆಕ್ಟರ್ ರವರಿಂದ ನೇಮಕವಾದ ಹೆಚ್ಚುವರಿ ಕಲೆಕ್ಟರ್)ಕ್ಕೆ ಮೇಲ್ಮನವಿ ಸಲ್ಲಿಸಬಹುದು ಮತ್ತು ಮೇಲ್ಮನವಿ ನ್ಯಾಯಾಲಯವು ಮೇಲ್ಮನವಿ ಸಲ್ಲಿಸಿದ ಮೂವತ್ತು ದಿನಗಳೊಳಗೆ ಅದನ್ನು ವಿಲೇ ಮಾಡುತ್ತದೆ.

(9) ಈ ಪ್ರಕರಣದ ಮೇರೆಗೆ ಉಪ-ವಿಭಾಗಿಯ ಅಧಿಕಾರಿ ನೀಡಿದ ಪ್ರತಿಯೊಂದು ಆದೇಶವೂ ಸತ್ರ ನ್ಯಾಯಾಲಯದ ತೀರ್ಪಿನಂತೆಯೇ (decree of a civil court) ಶಕ್ತವಾಗಿರುತ್ತದೆ ಮತ್ತು ಆದೇಶದಂತೆ ಪಾವತಿಯುಕ್ತವಾಗುವ ಮೊತ್ತವನ್ನು ಭೂಕಂದಾಯದ ಬಾಕಿಯಂತೆ ವಸೂಲು ಮಾಡತಕ್ಕದ್ದು.

(10) ಉಪ-ವಿಭಾಗೀಯ ಅಧಿಕಾರಿಯಲ್ಲಿ ಮನವಿ ಅಥವಾ ಅರ್ಜಿಯನ್ನು ಮತ್ತು ಮೇಲ್ಮನವಿ ಪ್ರಾಧಿಕಾರದಲ್ಲಿ ಮೇಲ್ಮನವಿಯನ್ನು ಸಲ್ಲಿಸುವ ಕ್ರಮ ಮತ್ತು ವಿಧಾನವು ನಿಗದಿಪಡಿಸಿದ ರೀತಿಯಲ್ಲಿರಬೇಕು.

*ವಿದ್ಯುನ್ಮಾನ ವ್ಯಾಪಾರ ಮತ್ತು ವಹಿವಾಟು ವೇದಿಕೆಯಲ್ಲಿ ಕಾರ್ಯಾಚರಣೆ ಮಾಡುವ ಹಕ್ಕಿನ ಅಮಾನತ್ತು ಅಥವಾ ರದ್ದು*

**9.** (1) ಭಾರತ ಸರ್ಕಾರದ ಮಾರಾಟ ಮತ್ತು ಪರಿಶೀಲನೆ ನಿರ್ದೇಶನಾಲಯದ ವ್ಯವಸಾಯ ಮಾರಾಟ ಸಲಹೆಗಾರರು ಅಥವಾ ಸಂಬಂಧಿಸಿದ ರಾಜ್ಯಸರ್ಕಾರದೊಡನೆ ಸಮಾಲೋಚನೆಯೊಂದಿಗೆ ಕೇಂದ್ರಸರ್ಕಾರದಿಂದ ಅಧಿಕಾರ ನಿಯುಕ್ತಿಗೊಂಡ ರಾಜ್ಯ ಸರ್ಕಾರದ ಒಬ್ಬ ಅಧಿಕಾರಿ, ಇವರು ತಮ್ಮಷ್ಟಕ್ಕೆ ತಾವೇ ಅಥವಾ ಮನವಿಯೊಂದರ ಮೇರೆಗೆ ಅಥವಾ ಸರ್ಕಾರದ ಯಾವುದೇ ಅಭಿಕರಣದ (ಏಜೆನ್ಸಿ) ಸೂಚನೆಯ ಮೇರೆಗೆ ಯಾವುದೇ ವಿಧಿವಿಧಾನಗಳ, ಮಾನದಂಡಗಳ, ನೋಂದಾವಣೆಯ ರೀತಿಯ ಮತ್ತು ನಡವಳಿಕೆ ಸಂಹಿತೆಯ ಅಥವಾ ಪ್ರಕರಣ 5 ರಡಿ ಸ್ಥಾಪನೆಯಾದ ವಿದ್ಯುನ್ಮಾನ ವ್ಯಾಪಾರ ಮತ್ತು ವಹಿವಾಟು ವೇದಿಕೆಯಿಂದ ನ್ಯಾಯಯುತ ವ್ಯಾಪಾರ ಆಚರಣೆಗಳ ಉಲ್ಲಂಘನೆ ಅಥವಾ

ಪ್ರಕರಣ 7ರಲ್ಲಿನ ನಿಯಮಗಳಿಗೆ ವಿರೋಧ ಇವುಗಳನ್ನು ಗಣನೆಗೆ ತೆಗೆದುಕೊಳ್ಳುತ್ತಾರೆ ಮತ್ತು ಮನವಿ ಸ್ವೀಕರಿಸಿದ ಅರವತ್ತು ದಿನಗಳೊಳಗಾಗಿ ಒಂದು ಆದೇಶದ ಮೂಲಕ ಕಾರಣವನ್ನು ದಾಖಲಿಸಿ -

(ಎ) ರೈತರಿಗೆ ಮತ್ತು ವ್ಯಾಪಾರಿಗಳಿಗೆ ಪಾವತಿಯುಕ್ತವಾದ ಮೊತ್ತದ ವಸೂಲಾತಿಗೆ ಆದೇಶ ನೀಡಬಹುದು; ಅಥವಾ

(ಬಿ) ಪ್ರಕರಣ 1 ರ ಉಪ-ವಿಧಿ (2) ರಂತೆ ನಿಗದಿಪಡಿಸಲಾದ ದಂಡ ವಿಧಿಸಬಹುದು; ಅಥವಾ

(ಸಿ) ತನಗೆ ಯುಕ್ತವೆನಿಸಿದಷ್ಟು ಅವಧಿಯವರೆಗೆ ವಿದ್ಯುನ್ಮಾನ ವ್ಯಾಪಾರ ಮತ್ತು ವಹಿವಾಟು ವೇದಿಕೆಯಾಗಿ ಕಾರ್ಯನಿರ್ವಹಿಸುವ ಹಕ್ಕನ್ನು ಅಮಾನತು ಮಾಡುವುದು ಅಥವಾ ರದ್ದು ಮಾಡಬಹುದು:

ಆದರೆ- ಅಂಥ ವಿದ್ಯುನ್ಮಾನ ವ್ಯಾಪಾರ ಮತ್ತು ವಹಿವಾಟು ವೇದಿಕೆಯ ವಾದವನ್ನು ಆಲಿಸುವ ಅವಕಾಶ ನೀಡದೆ ಮೊತ್ತದ ವಸೂಲಾತಿ ಮಾಡಲು, ದಂಡ ವಿಧಿಸಲು ಅಥವಾ ಕಾರ್ಯನಿರ್ವಹಿಸುವ ಹಕ್ಕನ್ನು ಅಮಾನತು ಅಥವಾ ರದ್ದು ಮಾಡಲು ಆದೇಶ ನೀಡುವಂತಿಲ್ಲ.

(2) ಉಪ-ವಿಧಿ (1) ರಡಿ ಮಾಡಲಾದ ಪ್ರತಿಯೊಂದು ಆದೇಶವೂ ಸತ್ರ ನ್ಯಾಯಾಲಯದ ತೀರ್ಪಿನಂತೆ (decree of a civil court) ಶಕ್ತವಾಗಿರುತ್ತದೆ, ಆದಕಾರಣ ಅದರಂತೆಯೇ ಜಾರಿಗೊಳಿಸಬಹುದಾಗಿರುತ್ತದೆ ಮತ್ತು ತೀರ್ಪಿನ ಮೊತ್ತವು ಭೂಕಂದಾಯದ ಬಾಕಿಯಂತೆ ವಸೂಲು ಮಾಡತಕ್ಕದ್ದಾಗಿರುತ್ತದೆ.

*ಕಾರ್ಯಾಚರಣೆಯ ಹಕ್ಕಿನ ರದ್ಧತಿ ವಿರುದ್ಧ ಮೇಲ್ಮನವಿ*

**10.** (1) ಪ್ರಕರಣ 9 ರಡಿಯ ಆದೇಶವೊಂದರಿಂದ ನೊಂದ ಯಾವುದೇ ಕಕ್ಷಿಯು ಈ ಆದೇಶ ಬಂದ ಅರುವತ್ತು ದಿನಗಳೊಳಗಾಗಿ ಈ ಉದ್ದೇಶಕ್ಕಾಗಿ ಕೇಂದ್ರಸರ್ಕಾರದಿಂದ ನೇಮಕಗೊಂಡ ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಗಿಂತ ಕಡಿಮೆಯಲ್ಲದ ಹುದ್ದೆಯ ಅಧಿಕಾರಿಯೊಬ್ಬರಲ್ಲಿ ಮೇಲ್ಮನವಿ ಸಲ್ಲಿಸಬಹುದು

ಆದರೆ- ಇಲ್ಲಿ ಹೇಳಲಾದ ಅರುವತ್ತು ದಿನಗಳೊಳಗಾಗಿ ಮೇಲ್ಮನವಿ ಸಲ್ಲಿಸದಿರಲು ಯುಕ್ತ ಕಾರಣಗಳವಿತ್ತೆಂದು ಮೇಲ್ಮನವಿದಾರನು ಪ್ರಾಧಿಕಾರಕ್ಕೆ ಮನವರಿಕೆಮಾಡಿಕೊಟ್ಟಲ್ಲಿ ಅರುವತ್ತು ದಿನಗಳು ಕಳೆದರೂ ಮೇಲ್ಮನವಿಯನ್ನು ಅಂಗೀಕರಿಸಬಹುದು, ಆದರೆ ಒಟ್ಟು ತೊಂಬತ್ತು ದಿನಗಳಿಗಿಂತ ಹೆಚ್ಚಾಗುವಂತಿಲ್ಲ,

(2) ಈ ಪ್ರಕರಣದಡಿ ಮಾಡಲಾದ ಪ್ರತಿಯೊಂದು ಮೇಲ್ಮನವಿಯೂ ನಿಗದಿ ಪಡಿಸಿದ ರೀತಿಯಲ್ಲಿ ಇರತಕ್ಕದ್ದು ಮತ್ತು ಅದನ್ನು ಮೇಲ್ಮನವಿ ಮಾಡಲಾದ ಆದೇಶದ ನಕಲು ಮತ್ತು ನಿಗದಿತ ಶುಲ್ಕದೊಂದಿಗೆ ಸಲ್ಲಿಸತಕ್ಕದ್ದು.

(3) ಮೇಲ್ಮನವಿಯೊಂದನ್ನು ವಿಲೇ ಮಾಡುವ ವಿಧಾನವನ್ನು ನಿಗದಿಪಡಿಸಬಹುದಾಗಿರುತ್ತದೆ.

(4) ಈ ಪ್ರಕರಣದಡಿ ಸಲ್ಲಿಸಲಾದ ಮೇಲ್ಮನವಿಯನ್ನು ಆಲಿಸಿ ಮೇಲ್ಮನವಿ ಸಲ್ಲಿಸಿದ ತೊಂಬತ್ತು ದಿನಗಳೊಳಗೆ ಅದನ್ನು ವಿಲೇ ಮಾಡತಕ್ಕದ್ದು.

ಆದರೆ- ಮೇಲ್ಮನವಿಯನ್ನು ವಿಲೇ ಮಾಡುವ ಮುನ್ನ ಮೇಲ್ಮನವಿದಾರನ ವಾದವನ್ನು ಆಲಿಸಲು ಅವಕಾಶ ನೀಡತಕ್ಕದ್ದು.

## ಅಧ್ಯಾಯ 4
## ದಂಡಗಳು

*ಅಧಿನಿಯಮ ಮತ್ತು ನಿಯಮಗಳನ್ನು ಉಲ್ಲಂಘಿಸಿದಕ್ಕೆ ದಂಡ*

**11.** (1) ಪ್ರಕರಣ 4 ಅಥವಾ ಅದರಡಿ ಮಾಡಲಾದ ನಿಯಮಗಳನ್ನು ಯಾರಾದರೂ ಉಲ್ಲಂಘಿಸಿದರೆ ಅವರು ಐದು ಲಕ್ಷ ರೂಪಾಯಿಗಳ ವರೆಗೂ ವಿಸ್ತರಿಸಬಹುದಾದ ಮತ್ತು ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದಷ್ಟು ಮೊತ್ತದ ದಂಡಕ್ಕೆ ಪಕ್ಕಾಗುತ್ತಾರೆ; ಮತ್ತು ಉಲ್ಲಂಘನೆಯು ಮುಂದುವರೆದರೆ ನಿಯಮೋಲ್ಲಂಘನೆಯ ಮುಂದುವರಿಕೆಯ ಮೊದಲ

ದಿನದ ಮುಂದಿನ ಪ್ರತಿಯೊಂದು ದಿನಕ್ಕೂ ಐದು ಸಾವಿರ ರೂಪಾಯಿಗಳು ಮೀರದಂತೆ ಹೆಚ್ಚುವರಿ ದಂಡ ವಿಧಿಸಲಾಗುತ್ತದೆ.

(2) ವಿದ್ಯುನ್ಮಾನ ವ್ಯಾಪಾರ ಮತ್ತು ವಹಿವಾಟು ವೇದಿಕೆಯನ್ನು ಹೊಂದಿರುವ ಅಥವಾ ನಿಯಂತ್ರಿಸುವ ಅಥವಾ ನಿರ್ವಹಿಸುವ ಯಾವುದೇ ವ್ಯಕ್ತಿ ಪ್ರಕರಣ 5 ಮತ್ತು 7 ಅಥವಾ ಅವುಗಳಡಿಯ ನಿಯಮಗಳನ್ನು ಉಲ್ಲಂಘಿಸಿದರೆ ಅಂಥವರು ಹತ್ತು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಮತ್ತು ಐವತ್ತು ಸಾವಿರ ರುಪಾಯಿಗಳಿಗೆ ಕಡಿಮೆಯಿಲ್ಲದಷ್ಟು ಮೊತ್ತದ ದಂಡಕ್ಕೆ ಪಕ್ಕಾಗುತ್ತಾರೆ; ಮತ್ತು ಉಲ್ಲಂಘನೆಯು ಮುಂದುವರೆದರೆ ನಿಯಮೋಲ್ಲಂಘನೆಯ ಮುಂದುವರಿಕೆಯ ಮೊದಲ ದಿನದ ಮುಂದಿನ ಪ್ರತಿಯೊಂದು ದಿನಕ್ಕೂ ಹತ್ತು ಸಾವಿರ ರೂಪಾಯಿಗಳು ಮೀರದಂತೆ ಹೆಚ್ಚುವರಿ ದಂಡ ವಿಧಿಸಲಾಗುತ್ತದೆ.

## ಅಧ್ಯಾಯ 5
## ವಿವಿಧ ವಿಷಯಗಳು

*ಸೂಚನೆಗಳು, ನಿರ್ದೇಶಗಳು, ಆದೇಶಗಳು ಅಥವಾ ಮಾರ್ಗದರ್ಶಿ ಸೂತ್ರಗಳನ್ನು ನೀಡುವ ಕೇಂದ್ರ ಸರ್ಕಾರದ ಅಧಿಕಾರ*

**12.** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರವು ಯಾವುದೇ ಪ್ರಾಧಿಕಾರಕ್ಕೆ ಅಥವಾ ಕೇಂದ್ರ ಸರ್ಕಾರಕ್ಕೆ ಅಧೀನವಾಗಿರುವ ಅಧಿಕಾರಿಗೆ, ಯಾವುದೇ ರಾಜ್ಯಸರ್ಕಾರಕ್ಕೆ ಅಥವಾ ರಾಜ್ಯಸರ್ಕಾರಕ್ಕೆ ಅಧೀನವಾಗಿರುವ ಯಾವುದೇ ಪ್ರಾಧಿಕಾರ ಅಥವಾ ಅಧೀನ ಅಧಿಕಾರಿಗೆ, ವಿದ್ಯುನ್ಮಾನ ವ್ಯಾಪಾರ ಮತ್ತು ವಹಿವಾಟು ವೇದಿಕೆಯೊಂದಕ್ಕೆ ಅಥವಾ ವಿದ್ಯುನ್ಮಾನ ವ್ಯಾಪಾರ ಮತ್ತು ವಹಿವಾಟು ವೇದಿಕೆಯನ್ನು ಹೊಂದಿರುವ ಅಥವಾ ನಿರ್ವಹಿಸುತ್ತಿರುವ ಯಾವುದೇ ವ್ಯಕ್ತಿಗೆ ಅಥವಾ ವ್ಯಾಪಾರಿಗೆ ಅಥವಾ ವ್ಯಾಪಾರಿಗಳ ವರ್ಗಕ್ಕೆ ಸೂಚನೆಗಳು, ನಿರ್ದೇಶಗಳು, ಆದೇಶಗಳು ಅಥವಾ ಮಾರ್ಗದರ್ಶಿ ಸೂತ್ರಗಳನ್ನು ನೀಡಬಹುದು.

*ಸದ್ಭಾವನೆಯಿಂದ ತೆಗೆದುಕೊಂಡ ಕ್ರಮಕ್ಕೆ ರಕ್ಷಣೆ*

**13.** ಈ ಅಧಿನಿಯಮದಡಿ ಅಥವಾ ಅದರಡಿ ಮಾಡಲಾದ ನಿಯಮಗಳು ಅಥವಾ ಆದೇಶಗಳಡಿ ಸದ್ಭಾವನೆಯಿಂದ ಮಾಡಿದ, ಮಾಡಬೇಕೆಂದು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಯಾವುದೇ ಅಧಿಕಾರಿ ಅಥವಾ ರಾಜ್ಯ ಸರ್ಕಾರದ ಯಾವುದೇ ಅಧಿಕಾರಿಯ ವಿರುದ್ಧ ದಾವೆ, ಫಿರ್ಯಾದು ಅಥವಾ ಇತರ ಕಾನೂನಿಕ ಕ್ರಮ ಹೂಡುವಂತಿಲ್ಲ.

*ಅಧಿನಿಯಮಕ್ಕೆ ಅತಿಶಯ ಪರಿಣಾಮವಿರುತ್ತದೆ (overriding effect)*

**14.** ಯಾವುದೇ ರಾಜ್ಯದ ಎಪಿಎಂಸಿ ಅಧಿನಿಯಮ ಅಥವಾ ಜಾರಿಯಲ್ಲಿರುವ ಯಾವುದೇ ಇತರ ಕಾನೂನು ಅಥವಾ ಜಾರಿಯಲ್ಲಿರುವ ಕಾನೂನಿನ ಬಲ ಹೊಂದಿದ ಯಾವುದೇ ಸಂಲೇಖ- ಇವುಗಳಲ್ಲಿರುವುದಕ್ಕೆ ಹೊಂದುವಂತಿರದಿದ್ದರೂ ಈ ಅಧಿನಿಯಮದ ಉಪಬಂಧಗಳು ಅತಿಶಯ ಪರಿಣಾಮ ಹೊಂದಿರುತ್ತವೆ.

*ಸತ್ರ ನ್ಯಾಯಾಲಯಗಳ (civil courts) ವ್ಯಾಪ್ತಿಗೆ ಬರುವುದಿಲ್ಲ*

**15.** ಈ ಅಧಿನಿಯಮದಡಿ ಅಥವಾ ಅದರಡಿ ಮಾಡಲಾದ ನಿಯಮಗಳಡಿ ಪ್ರಾಪ್ತವಾದ ಅಧಿಕಾರವುಳ್ಳ ಯಾವುದೇ ಪ್ರಾಧಿಕಾರ ಪರಿಗಣಿಸಬಹುದಾದ ಮತ್ತು ವಿಲೇ ಮಾಡಬಹುದಾದ ಯಾವುದೇ ವಿಷಯವನ್ನು ಅನುಮತಿಸಲು ಯಾವುದೇ ಸತ್ರ ನ್ಯಾಯಾಲಯಕ್ಕೆ ವ್ಯಾಪ್ತಿಯಿರುವುದಿಲ್ಲ.

ಅಧಿನಿಯಮವು *ಕೆಲವು ವಹಿವಾಟುಗಳಿಗೆ ಅನ್ವಯಿಸುವುದಿಲ್ಲ*

**16.** ಈ ಅಧಿನಿಯಮದಲ್ಲಿರುವ ಯಾವುದೇ ಅಂಶವು 1956 ರ ಪ್ರತಿಭೂತಿ ಕರಾರುಗಳ (ನಿಯಮನ) ಅಧಿನಿಯಮದಡಿ ಮಾನ್ಯವಾದ (Securities Contracts (Regulation) Act) ಷೇರು ವಿನಿಮಯ ಕೇಂದ್ರಗಳು ಮತ್ತು ತೀರುವಳಿ ಪಾಲಿಕೆ (clearing corporation) ಅಥವಾ ಅದರಡಿ ನಡೆಸಲಾದ ವಹಿವಾಟುಗಳಿಗೆ ಅನ್ವಯವಾಗುವುದಿಲ್ಲ.

*ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ*

**17.** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರಲು ಕೇಂದ್ರ ಸರ್ಕಾರವು, ಅಧಿಸೂಚನೆಗಳ ಮೂಲಕ, ನಿಯಮಗಳನ್ನು
ರಚಿಸಬಹುದು.

(2) ನಿರ್ದಿಷ್ಟವಾಗಿ ಮತ್ತು ಮೇಲೆ ಹೇಳಿದ ಅಧಿಕಾರಗಳ ಸಾಮಾನ್ಯತ್ವಕ್ಕೆ ಧಕ್ಕೆಯಿಲ್ಲದಂತೆ, ಈ ನಿಯಮಗಳು ಈ ಮುಂದಿನವುಗಳಲ್ಲಿ ಎಲ್ಲ ಅಥವಾ ಯಾವುದೇ ವಿಷಯಗಳಿಗೆ ಅವಕಾಶ ಮಾಡಿಕೊಡಬಹುದು:-

(ಎ) ಪ್ರಕರಣ 4 ರ ಉಪವಿಧಿ (3) ರಂತೆ ವ್ಯಾಪಾರಿಯೊಬ್ಬನಿಗೆ ವಿದ್ಯುನ್ಮಾನ ನೋಂದಾವಣೆ ವ್ಯವಸ್ಥೆ ಮತ್ತು ಪರಿಶಿಷ್ಟಿತ ರೈತರ ಉತ್ಪನ್ನದ ವ್ಯಾಪಾರ ವಹಿವಾಟಿನ ರೀತಿನೀತಿಗಳು;

(ಬಿ) ಪ್ರಕರಣ 4 ರ ಉಪವಿಧಿ (3) ರಂತೆ ಷರತ್ತಿನ ಮೇರೆಗೆ ಪಾವತಿಯ (payment under proviso) ವಿಧಾನ;

(ಸಿ) ಪ್ರಕರಣ 8 ರ ಉಪವಿಧಿ (10) ರಂತೆ ಉಪ-ವಿಭಾಗೀಯ ಪ್ರಾಧಿಕಾರದಲ್ಲಿ ಮನವಿಯೊಂದನ್ನು ಸಲ್ಲಿಸುವ ಮತ್ತು ಮೇಲ್ಮನವಿ ಪ್ರಾಧಿಕಾರದಲ್ಲಿ ಮೇಲ್ಮನವಿಯನ್ನು ಸಲ್ಲಿಸುವ ರೀತಿ ಮತ್ತು ವಿಧಾನ;

(ಡಿ) ಪ್ರಕರಣ 10 ರ ಉಪವಿಧಿ (2) ರಡಿ ವಹಿವಾಟು ಕುರಿತ ಮಾಹಿತಿ;

(ಇ) ಪ್ರಕರಣ 10 ರ ಉಪವಿಧಿ (2) ರಡಿ ಮನವಿ ಸಲ್ಲಿಸಲು ನಮೂನೆ ಹಾಗೂ ವಿಧಾನ ಮತ್ತು ಪಾವತಿಸಬೇಕಾದ ಶುಲ್ಕ;

(ಎಫ್) ಪ್ರಕರಣ 10ರ ಉಪವಿಧಿ (3) ರಂತೆ ಮೇಲ್ಮನವಿಯನ್ನು ವಿಲೇ ಮಾಡುವ ವಿಧಾನ.

(ಜಿ) ನಿಗದಿ ಮಾಡಬೇಕಾದ ಅಥವಾ ಮಾಡಬಹುದಾದ ಇತರ ಯಾವುದೇ ವಿಷಯ.

*ನಿಯಮಗಳ ಮಂಡನೆ*

**18.** ಕೇಂದ್ರ ಈ ಅಧಿನಿಯಮದಡಿ ರಚಿಸಿದ ಪ್ರತಿಯೊಂದು ನಿಯಮವನ್ನೂ, ಅದನ್ನು ರಚಿಸಿದ ಮೇಲೆ ಕೂಡಲೇ ಶಾಸನ ಸಭೆಯ (Parliament) ಎರಡೂ ಸದನಗಳಲ್ಲಿ, ಅಧಿವೇಶನ ನಡೆಯುತ್ತಿದ್ದಾಗ, ಒಂದು ಅಥವಾ ಅನುಕ್ರಮದ ಎರಡು ಅಧಿವೇಶನಗಳಲ್ಲಿ ಒಟ್ಟು ಮೂವತ್ತು ದಿನಗಳ ಅವಧಿಯಲ್ಲಿ ಮಂಡಿಸತಕ್ಕದ್ದು, ಮತ್ತು ಅಧಿವೇಶನ ಅಥವಾ ಅನುಕ್ರಮದ ಅಧಿವೇಶನಗಳು ಮುಕ್ತಾಯವಾಗುವ ಮೊದಲು, ನಿಯಮದಲ್ಲಿ ಯಾವುದಾದರೂ ಮಾರ್ಪಾಡು ಮಾಡಲು ಎರಡೂ ಸದನಗಳು ಒಪ್ಪಿದರೆ ಅಥವಾ ನಿಯಮವನ್ನು ಮಾಡತಕ್ಕದ್ದಲ್ಲ ಎಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು, ಸಂದರ್ಭಕ್ಕೆ ತಕ್ಕಂತೆ, ಅಂಥ ಮಾರ್ಪಾಡು ಮಾಡಿದ ರೂಪದಲ್ಲಿ ಮಾತ್ರ ಜಾರಿಯಲ್ಲಿರುತ್ತದೆ ಅಥವಾ ವರ್ಜಿತವಾಗುತ್ತದೆ; ಆದ್ದರಿಂದ, ಆದಾಗಿಯೂ, ಅಂಥ ಯಾವುದೇ ಮಾರ್ಪಾಡು ಅಥವಾ ವರ್ಜನೆ (annulment) ಆ ನಿಯಮದಡಿ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ (validity) ಬಾಧೆಯಿರುವುದಿಲ್ಲ.

*ತೊಂದರೆಗಳನ್ನು ನಿವಾರಿಸುವ ಅಧಿಕಾರ*

**19.** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿ ಮಾಡುವಲ್ಲಿ ಏನೇ ತೊಂದರೆ ಉಂಟಾದಲ್ಲಿ ಆ ತೊಂದರೆಯನ್ನು ನಿವಾರಿಸಲು ಕೇಂದ್ರ ಸರ್ಕಾರವು ಈ ಅಧಿನಿಯಮದ ಉಪಬಂಧಗಳಿಗೆ ವಿರೋಧವಾಗದಿರುವ ಅಗತ್ಯವೆನಿಸಿದ ಉಪಬಂಧಗಳನ್ನು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಬಹುದು;

ಆದರೆ, ಈ ಅಧಿನಿಯಮದ ಜಾರಿಯ ಆರಂಭದ ದಿನಾಂಕದಿಂದ ಮೂರು ವರ್ಷಗಳ ಅವಧಿಯ ನಂತರ ಯಾವ ಆದೇಶವನ್ನೂ ಮಾಡುವಂತಿಲ್ಲ.

(2) ಈ ವಿಧಿಯಡಿ ಮಾಡಲಾದ ಪ್ರತಿಯೊಂದು ಆದೇಶವನ್ನೂ ಅದನ್ನು ಮಾಡಲಾದ ಕೂಡಲೇ ಶಾಸನ ಸಭೆಯ ಎರಡೂ ಸದನಗಳ ಮುಂದೆ ಮಂಡಿಸತಕ್ಕದ್ದು.

*2020 ರ ಸುಗ್ರೀವಾಜ್ಞೆ 10 / ರದ್ದತಿ ಮತ್ತು ಸಂರಕ್ಷಣೆ (Repeal and savings)*

**20.** (1) 2020 ರ ರೈತರ ಉತ್ಪನ್ನ ವ್ಯಾಪಾರ ಮತ್ತು ವಾಣಿಜ್ಯ (ಉತ್ತೇಜನ ಮತ್ತು ಸೌಲಭ್ಯ) ಸುಗ್ರೀವಾಜ್ಞೆಯನ್ನು ಈ ಮೂಲಕ ರದ್ದು ಪಡಿಸಲಾಗಿದೆ.

(2) ಈ ರದ್ದತಿ ಏನೇ ಇರಲಿ, ಸದರಿ ಸುಗ್ರೀವಾಜ್ಞೆಯಡಿ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವು ಈ ಅಧಿನಿಯಮದ ಸಂಬಂಧಿತ ಉಪಬಂಧಗಳಡಿ ಮಾಡಿದ್ದೆಂದು ಅಥವಾ ಕೈಗೊಂಡಿದ್ದೆಂದು ಪರಿಗಣಿಸಲಾಗುವುದು.

ಡಾ. ಜಿ. ನಾರಾಯಣ ರಾಜು,
ಭಾರತ ಸರ್ಕಾರದ ಕಾರ್ಯದರ್ಶಿ.

---

ವ್ಯವಸ್ಥಾಪಕ, ಭಾರತ ಸರ್ಕಾರದ ಮುದ್ರಣಾಲಯ, ಮಿಂಟೋ ರಸ್ತೆ, ನವದೆಹಲಿ-110002 ಇವರು ಇಳಿಸಿಕೊಂಡು (ಅಪ್ ಲೋಡ್) ಪ್ರಕಟಣೆಗಳ ನಿಯಂತ್ರಕರು, ದೆಹಲಿ-110054 ಇವರು ಪ್ರಕಟಿಸಿದ್ದು.

MGIPMRND-858GI- 27-9-2020.